Sri A. R. BADARINARAYANA.—Is the Government aware that the process of granting lands to the ryots whose lands have been submerged is not yet complete and there are so many cases of lands submerged pending before the Government, Sir ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗಾಗಲೇ ಹೇಳಿದೆ, ಮಾನ್ಯ ತಿಮ್ಮಪ್ಪನವರು ಹೇಳಿದ ಹಾಗೆ ಇನ್ನೂ ಅನೇಕರಿಗೆ ಜಮೀನುಕೊಕ್ಕಿಲ್ಲ ಎನ್ನುವುದು ಗೊತ್ತಿದೆ. ಕೆಲವರಿಂದ ಅರ್ಜಿಗಳೇ ಬಂದಿಲ್ಲ. ಎಲ್ಲೆಲ್ಲ ಅವರ ಜಮೀನು ಇದೆ, ಗೊತ್ತಿಲ್ಲದೆ ಇರುವವರಿಗೆ ತಿಳುವಳಿಕೆ ಕೊಟ್ಟು ಇಂಥ ಕಡೆ ಜಮೀನು ಇದೆ, ನೀವು ಅರ್ಜಿ ಹಾಕಿಕೊಳ್ಳಬಹುದು ಎಂದು ತಿಳಿಸುತ್ತೇವೆ. ಎಷ್ಟು ಜಮೀನು ಉಳಿದಿದೆ ಅದನ್ನು ಕೂಡಲೇ ಅಧಿಕಾರಿಗಳಿಗೆ ತಿಳಿಸಿ, ಅದನ್ನು ಹಂಚಲು, ಮುಳುಗಡೆದಾರರಿಂದ ಅರ್ಜಿ ಹಾಕಿಕೊಳ್ಳುವುದಕ್ಕೆ ಅವಕಾಶ ಕಲ್ಪಿಸಿಕೊಡುತ್ತೇವೆ.

Sri A. R. BADARINARAYANA.—Is it a fact that some lands which were reserved for ryots whose lands have been submerged have already been given to persons whose lands have not been submerged ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನು ಆಗಲೇ ಹೇಳಿದೆ, ಮುಳುಗಡೆದಾರರಿಗೆ 16-7-1971 ರವರೆಗೆ ಜಮೀನನ್ನು ಕೊಟ್ಟಿದ್ದಾರೆ. ಅಲ್ಲಿಂದೀಚೆಗೆ ಅವರಿಂದ ಅರ್ಜಿಗಳು ಹೆಚ್ಚಾಗಿ ಬಾರದೆ ಇದ್ದುದರಿಂದ ಬೇರೆಯವರಿಗೆ ಕೊಟ್ಟಿದೆ. ಇರತಕ್ಕ ವಿಷಯವನ್ನು ಮಾನ್ಯ ಸಭೆಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್. 16-7-1971 ರವರೆಗೆ ಮುಳುಗಡೆದಾರರಿಗೆ ಜಮೀನನ್ನು ಹಂಚುವುದಕ್ಕೆ ಅವಕಾಶ ಕೊಟ್ಟಿದ್ದೇವೆಂದು ಹೇಳಿದಿರಿ. ಯಾರಿಗೆ ಈಗ ಜಮೀನನ್ನು ಮಂಜೂರು ಮಾಡಿದ್ದೀರಿ ಅವರಲ್ಲಿ ಪರಿಶಿಷ್ಟ ವರ್ಗ, ಪರಿಶಿಷ್ಟಜನಾಂಗದವರು ಇದ್ದಾರೆ. ನೂರಾರು 300 ಎಕರೆ ಜಮೀನನ್ನು ಬೇರೆಯವರಿಗೆ ಕೊಟ್ಟಿದ್ದಾರೆ. ಇಂಥಾದ್ದನ್ನು ತಪ್ಪಿಸುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮುಳುಗಡೆದಾರರಿಗೂ ಮತ್ತು 300 ಎಕರೆಯವರಿಗೂ ಏನೂ ಸಂಬಂಧವಿಲ್ಲ. ಶರಾವತಿ ಯೋಜನೆಯಲ್ಲಿ ಮುಳುಗಡೆದಾರರಿಗೆ ಜಮೀನನ್ನು ಕಾದಿರಿಸಲ್ಪಟ್ಟಿತ್ತು. ಅವರಿಂದ ಅರ್ಜಿಗಳು ಬಾರದೆ ಇದ್ದುರಿಂದ ಬೇರೆಯವರಿಗೆ ಕೊಟ್ಟಿದ್ದಾರೆ. ಮಾನ್ಯ ಜಯಪ್ರಕಾಶ್‌ನಾರಾಯಣ್ ಅವರು ಹೇಳತಕ್ಕ 300 ಎಕರೆ ಜಮೀನು ಯಾವುದು ಎನ್ನುವುದನ್ನು ವಿವರವಾಗಿ ತಿಳಿಸಿದರೆ, ಅದನ್ನು ತಿಳಿದು ಹೇಳಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಈ ರೀತಿಯಾಗಿ ಕೊಟ್ಟಂಥ ಜಮೀನನ್ನು ಕೆಲವರು ಪರಭಾರೆ ಮಾಡಿರುವುದು ಗೊತ್ತಾಗಿದೆ ಎಂದು ಹೇಳಿದ್ದೀರಿ. ಪರಭಾರೆ ಅಸಂಖ್ಯಾತ ಪ್ರಮಾಣದಲ್ಲಿ ಆಗಿದೆ. ಅನೇಕ ರಾಜಕಾರಣಿಗಳು ಮತ್ತು ವ್ಯಾಪಾರಸ್ಥರು ಮತ್ತು ಪ್ರಬಲವಾದ ಜನರು ನೂರಾರು ಎಕರೆ ಜಮೀನನ್ನು ಸಂಗ್ರಹಣೆ ಮಾಡಿಕೊಂಡಿದ್ದಾರೆ. ತಲಾಟೆಗಳು ಶರೀಕಾಗಿ ಈ ವಿಷಯ ಸರ್ಕಾರದ ಗಮನಕ್ಕೆ ಬಂದಿಲ್ಲ. ಇದಕ್ಕೆ ತಾವು ವಿಶೇಷವಾದಂಥ ಸಿಬ್ಬಂದಿಯನ್ನು ಕಳುಹಿಸಿ ಎಲ್ಲೆಲ್ಲ ಈ ರೀತಿಯಾಗಿದೆ ಎನ್ನುವುದನ್ನು ರೆಕ್ಕೆ ತರಿಸಿ, ಪರಿಶೀಲನೆಮಾಡಿಸಿ ವರದಿ ತರಿಸಿಕೊಳ್ಳುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗಾಗಲೇ ಕೆಲವರು ಪರಭಾರೆ ಮಾಡಿರುವುದು ಗೊತ್ತಾಗಿದೆ. ಇದಕ್ಕೋಸ್ಕರ ವಿಶೇಷ ಸಿಬ್ಬಂದಿಯನ್ನು ನೇಮಿಸಿ ಎಂದು ಹೇಳುತ್ತಿದ್ದಾರೆ, ನಾನು ಅಲ್ಲಿಯ ವಿಷಯ ತಿಳಿದು ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ.

## Elimination of Corruption from Administration

3 Sri PRABHAKAR TELKAR (Kalgi).—Will the Chief Minister be pleased to state :—

(a) the number of cases trapped and detected by the Vigilance Commission in the State from 1972 till June 1974 (Districtwise particulars be furnished) ;

(*b*) the number of cases enquired and the number of persons prosecuted, convicted and acquitted ;

(*c*) whether the Government has any proposal to wipe out corruption from the administration ?

Sri S. M. KRISHNA (Minister for Industries and Parliamentary Affair) [On behelf af SRI D. DEVARAJ URS (Chief Minister) ].—

(*a*) Statement placed on the Table of the House **

(*b*)

| | | | |
|---|---|---|---|
| 1. | Number of cases enquired | ... | 48 |
| 2. | Number of persons prosecuted | ... | 39 |
| 3. | Number of persons convicted | ... | 19 |
| 4. | Number of persons acquitted | ... | 20 |

(*c*) The Vigilance Commission has been reorganised and the staff augmented to check the menace of corruption in public life. The Karnataka Lokayukta and Upalokayukta Bill was introduced in the Assembly on 12-8-1973 and this has been referred to the Joint Select Committee. This Bill also aims at wiping out corruption from the administration to the maximum extent possible.

Sri PRABHAKAR TELKAR.—Sir, to Question No. (a) the number of cases trapped and detected by the Vigilance Commission, the list given shaws 68 cases have been booked for the last to years. For Bangalore City and District, it is shown as 16 and 6 and for Kolar as 10 and in other districts it is shown as one, two or three. I want to know whether the Vigilance Commission is working properly or not. Will the Government furnish the complaints received by the Commission till that particular date ?

† Sri S. M. KRISHNA.—If a specific question is put about the number of complaints, then I can furnish the answers, not offhand.

Sri PRABHAKAR TELKAR.—Teen again to Question (*c*) "whether the Government has any proposal to wipe out corruption from the administration," the reply is "The Vigilance Commission has been reorganised and the staff augmented to check the menace of corruption in public life." Will the Government give the date on which this Vigilance Commission has been reorganised and after the reorganisation is there any improvement in getting more cases by the Commission ?

Sri S. M. KRISHNA.—Reorganisation has been effected but I am afraid I cannot give the date when the re-organisation came into effect. As a result of this reorganisation there are three wings *viz.*, Vigilance Bureau of Investigation, the Directorate of Vigilance and the third one is the Technical Audit Cell. With these three wings we hope to fight corruption.

---

** Copy placed in the Karnataka Legislature library *Vide* No S dated 14-2-75

Sri M. S. KRISHNAN.—Sir, you have stated that you will try to wipe out corruption with Lokayukta etc. Do you really believe that in the present capitalist system it will be possible to wipe out corruption on the basis of your Lokayukta and Upalokayukta and Vigilance Commmission ?

Sri S. M. KRISHNA.—I do not know if corruption has been totally wiped in the Communist set up.

ಶ್ರೀ ಎಂ. ಬಿ. ರಾಮಸ್ವಾಮಿ.—ಪ್ರಶ್ನೆ ಐ (ಬಿ) ಗೆ ಉತ್ತರವಾಗಿ 20 ಜನರನ್ನು ಅರೆಸ್ಟ್ ಮಾಡಿದ್ದೇವೆ ಎಂದು ತಿಳಿಸಿದ್ದೀರಿ ತಾವು ಒತ್ತೆಡಕ್ಕೆ ಒಳಗಾಗಿ ಅರೆಸ್ಟ್ ಮಾಡಿದ್ದೀರೋ ಅಥವಾ ಸಾಬೀತು ಆಗಿ ಬಿಟ್ಟಿದ್ದರೋ ಎಂಬುದನ್ನು ತಿಳಿಸುವುದಕ್ಕಾಗುತ್ತದೆಯೇ ?

ಶ್ರೀ ಎಸ್. ಎಂ. ಕೃಷ್ಣ.—ಸಾಬೀತು ಆಗಿ ಬಿಟ್ಟಿದ್ದೇವೆ.

ಶ್ರೀ ಕೆ. ಎಚ್. ಹನುಮೇಗೌಡ.—ವಿಜಿಲೆನ್ಸ್ ಕಮಿಷನ್‌ನಲ್ಲಿರತಕ್ಕ ಮುಕ್ಯಾಲು ಭಾಗ ಅಧಿಕಾರಿಗಳು ರೆವಿನ್ಯೂ ಇಲಾಖೆಯಲ್ಲಿ, ಪೋಲೀಸ್ ಇಲಾಖೆಯಲ್ಲಿ ಭ್ರಷ್ಟಾಚಾರಕ್ಕೆ ಒಳಗಾಗಿ ಖ್ಯಾತಿ ಹೊಂದಿದ್ದಾರೆ. ಇವರಿಂದ ಕೇಸುಗಳು ಡಿಟೆಕ್ಟ್ ಆಗುವ ಬದಲು ಪ್ರೊಟೆಕ್ಟ್ ಆಗುತ್ತವೆ ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಎಂ. ಕೃಷ್ಣ.—ಅವರು ಖ್ಯಾತರಾಗಿರತಕ್ಕ ಭ್ರಷ್ಟಾಚಾರದ ಅಧಿಕಾರಿಗಳು ಎಂದು ನಿರ್ದಿಷ್ಟ ನಿದರ್ಶನವನ್ನು ಏನಾದರೂ ತಾವು ಸರ್ಕಾರದ ಗಮನಕ್ಕೆ ತಂದರೆ ಅವರ ಮೇಲೆಯೂ ಕ್ರಮ ತೆಗೆದುಕೊಳ್ಳುತ್ತೇವೆ. ಅವರು ಕ್ರಮದಿಂದ ಹೊರತಾಗಿಲ್ಲ.

Sri PRABHAKAR TELKAR.—Sir, will you just kindly inform in which department the corruption is more, according to the statistics you have received from the Vigilance Commission ?

Sri S. M. KRISHNA.—It depends upon one's guess, I suppose.

9-00 A. M.

## Hesagal and other Projects in Mudigere Taluk

77. Sri G. PUTTASWAMY (Munigere).—Will the Minister of State for Minor Irrigation be pleased to state :—

(*a*) whether it is not a fact that estimates for Hesagal Project Gabblihalla and other Projects in Mudigere Taluk have been prepared ;

(*b*) if so, whether the Government intend to make provision for these works in the Budget Estimate for 1975-76 ?

Sri S. B. NAGARAL (Minister of State for Minor Irrigation).—

(*a*) No, only the estimate is got up for the construction of pick-up across halla near Halike in Mudigere Taluk.

(*b*) Provision will be made in the budget if the Projects are found technically feasible and subject to availability of funds.

ಶ್ರೀ ಜಿ.ಪುಟ್ಟಸ್ವಾಮಿ.—ಮೂಡಿಗೆರೆ ತಾಲ್ಲೂಕಿನಗಬ್ಬಿ ಹಳ್ಳದ ಯೋಜನೆ ಹಾಗೂ ಇತರ ಯೋಜನೆಗಳ ಅಂದಾಜು ತಯಾರಿಸಿರುವುದು ನಿಜವಲ್ಲವೇ ಎಂದು ಕೇಳಿರುವುದಕ್ಕೆ 'ಇಲ್ಲ' ಎಂದು ಹೇಳಿದ್ದೀರಿ